**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 997/2021**

**ಪ್ರಾಸಾಃ- 4 ಚಾಸಾಃ- 7**

| | | |
|---|---|---|
| ಸಾಕ್ಷಿಯ ಹೆಸರು | : | ತಿಮ್ಮಪ್ಪ |
| ತಂದೆಯ ಹೆಸರು | : | ಲೇಟ್ ಬಸಪ್ಪ |
| ವಯಸ್ಸು | : | 50 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 16.9.2025**
**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 1, 4, 5 ರವರ ಪರಿಚಯ ಇದೆ. ಅವರು ಹರಿಜನ ಮಾದಿಗ ಜನಾಂಗಕ್ಕೆ ಸೇರಿದ್ದಾರೆ. ನಾನು ಹರಿಜನ ಮಾದಿಗ ಜನಾಂಗಕ್ಕೆ ಸೇರಿದ್ದೇನೆ. ಈಗ ಸುಮಾರು ಎರಡೂವರೆ ವರ್ಷದ ಹಿಂದೆ ನಾನು ಬಳ್ಳಾರಿಯ ಒಪಿಡಿ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿದ್ದೆ. ಆ ಸಮಯದಲ್ಲಿ ಚಾಸಾ 1 ಸ್ಟ್ರೆಚರ್ ಮೇಲೆ ಮಲಗಿದ್ದ. ನಾನು ಆತನ ಹೆಂಡತಿಯನ್ನು ವಿಚಾರಿಸಿದಾಗ ಅವಳು ಹೊಲದ ವಿಷಯವಾಗಿ ಗಲಾಟೆಯಾಗಿತ್ತು ಎಂದು ಅದರಲ್ಲಿ ಅವರು ಗಾಯಗೊಂಡಿದ್ದಾಗಿ ತಿಳಿಸಿದರು. ಚಾಸಾ 1 ಈತನಿಗೆ ಕೊಡಲಿಯಿಂದ ಹೊಡೆದಿದ್ದರು ಎಂದು ಹೇಳಿದ್ದಳು. ನಾನು ಗಾಯಗೊಂಡಿದ್ದ ಚಾಸಾ 1 ಮತ್ತು ಆತನ ಹೆಂಡತಿಯನ್ನು ವೈದ್ಯರ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದೆ. ಅವರಿಗೆ ಯಾರು ಹಲ್ಲೆ ಮಾಡಿದ್ದರು ಎಂದು ನನಗೆ ಮಾಹಿತಿ ಇಲ್ಲ. ನಾನು ಈ ಪ್ರಕರಣದಲ್ಲಿ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

ನಾನು ಚಾಸಾ 4 ರವರನ್ನು ಘಟನೆ ಬಗ್ಗೆ ಕೇಳಿದಾಗ ಚಾಸಾ 4 ರವರು ಆರೋಪಿತರೆಲ್ಲರೂ ಹೊಲಕ್ಕೆ ಬಂದಿದ್ದರು ಎಂದು ಮತ್ತು 1 ನೇ ಆರೋಪಿ ತನ್ನ ಗಂಡನಿಗೆ ಮಾದಿಗ ಸೂಳೆ ಮಗನೇ ಎಂದು ಬೈದಿದ್ದ ಎಂದು ಮತ್ತು ತಹಸೀಲ್ದಾರ್ ಕೇಸು ವಾಪಾಸ್ಸು ತೆಗೆದುಕೊಳ್ಳದಿದ್ದಲ್ಲಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು ಎಂದು ಹೇಳಿದ್ದಳು ಎಂದರೆ ಸರಿ. ಆರೋಪಿ 5 ಕೊಡಲಿಯಿಂದ ಚಾಸಾ 1 ಈತನನ್ನು ಸಾಯಿಸುವ ಉದ್ದೇಶದಿಂದ ಹಣೆಗೆ ಮತ್ತು ಕೈಗಳಿಗೆ ಹಲ್ಲೆ ಮಾಡಿದ್ದ ಎಂದು ತಿಳಿಸಿದ್ದಳು ಎಂದರೆ ಸರಿ. ಆರೋಪಿ 7 ಮತ್ತು 8 ತನಗೆ ಕುಡುಗೋಲಿನಿಂದ ಹಲ್ಲೆ ಮಾಡಿದ್ದರು ಎಂದು ಹೇಳಿದ್ದಳು ಎಂದರೆ ಸರಿ. ಆರೋಪಿ 9 ಕಲ್ಲಿನಿಂದ ಚಾಸಾ 1 ರವರ ಮಗ ಮತ್ತು ಮಗಳಾದ ಶಂಕರ್ ಮತ್ತು ಲಕ್ಷ್ಮಿಯ ತಲೆಗೆ ಹೊಡೆದಿದ್ದರು ಎಂದು ಹೇಳಿದ್ದಳು ಎಂದರೆ ಸರಿ. ಆರೋಪಿ 4 ಅವರಿಗೆ ಜಾತಿ ಹಿಡಿದು ಬೈದು ಪ್ರಾಣ ಬೆದರಿಕೆ ಹಾಕಿದ್ದರು ಎಂದು ಚಾಸಾ 4 ನನಗೆ ಹೇಳಿದ್ದಳು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಪೋಲೀಸರು ನನಗೆ ನೋಟೀಸ್‌ನ್ನು ನೀಡಿ ಹೇಳಿಕೆ ಕೊಡುವಂತೆ ಯಾವತ್ತೂ ಕರೆದಿಲ್ಲ. ಚಾಸಾ 1 ನನಗೆ ಸಂಬಂಧಿಕನಾಗಬೇಕು ಎಂದರೆ ಸರಿ. ನಾನು ಚಾಸಾ 1 ರವರ ಹೆಂಡತಿಯಾದ ಚಾಸಾ 4 ರವರನ್ನು ಯಾವತ್ತೂ ವಿಚಾರಣೆ ಮಾಡಿಲ್ಲ. ಚಾಸಾ 4 ನನಗೆ ಆಸ್ಪತ್ರೆಯಲ್ಲಿ ಹೊಲದಲ್ಲಿ ಗಲಾಟೆಯಾದ ವಿಷಯವನ್ನು ತಿಳಿಸಿದ್ದಳು. ಚಾಸಾ 4 ನನಗೆ ಘಟನೆ ಸಮಯದಲ್ಲಿ ಯಾರು ಏನು ಮಾಡಿದ್ದರು ಎಂದು ಹೇಳಿದ್ದಳು. ನಾನು ಘಟನೆ ಬಗ್ಗೆ ಯಾವುದೇ ದೂರನ್ನು ಕೊಡಲಿಲ್ಲ. ಆರೋಪಿ ಹಾಗೂ ಚಾಸಾ 1 ರವರ ನಡುವೆ ಹೊಲದ ವಿಷಯವಾಗಿ ಕೇಸು ನಡೆಯುತ್ತಿದೆ ಎಂದರೆ ಸರಿ. ನಾನು ಪೋಲೀಸರ ಮುಂದೆ ನಾನು ಆಸ್ಪತ್ರೆಗೆ ಚಿಕಿತ್ಸೆಗೆ ಹೊಗಿದ್ದೆ ಎಂದು ಆ ಸಮಯದಲ್ಲಿ ಚಾಸಾ 1 ಅಲ್ಲಿಗೆ ಬಂದಿದ್ದ ಎಂದು ಮತ್ತು ಆತನ ಹೆಂಡತಿ ನನಗೆ ಘಟನೆ ಬಗ್ಗೆ ತಿಳಿಸಿದ್ದಳು ಎಂದು ಮತ್ತು ಅವರಿಗೆ ಚಿಕಿತ್ಸೆ ಕೊಡಿಸಿದ್ದೆ ಎಂದು ಹೇಳಿದ್ದೇನೆ. ಆ ದಿವಸ ನನಗೆ ಚಳಿ ಜ್ವರ ಇದ್ದುದರಿಂದ ಆಸ್ಪತ್ರೆಗೆ ಹೋಗಿದ್ದೆ. ಒಪಿಡಿ ಆಸ್ಪತ್ರೆಯಲ್ಲಿ ಚಳಿ ಜ್ವರ ನೋಡುವ ವಿಭಾಗ, ಗಾಯಗಳನ್ನು ನೋಡುವ ವಿಭಾಗ ಮತ್ತು ಬೇರೆ ಖಾಯಿಲೆಗಳಿಗೆ ಬೇರೆ ಬೇರೆ

ವಿಭಾಗಗಳು ಇವೆ ಎಂದರೆ ಸರಿ. ನಾನು ಆ ದಿವಸ ಆಸ್ಪತ್ರೆಗೆ ಹೋಗಿಲ್ಲ ಮತ್ತು ಯಾವುದೇಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ಮತ್ತು 4 ರವರೂ ಸಹ ಆಸ್ಪತ್ರೆಗೆ ಬಂದಿರಲ್ಲಿ ಮತ್ತು ಅವರಿಗೆ ಯಾವುದೆ ಗಾಯಗಳು ಆಗಿರಲಿಲ್ಲ ಮತ್ತು ನಾನು ಅವರಿಗೆ ಯಾವುದೆ ಚಿಕಿತ್ಸೆ ಕೊಡಿಸಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾ 1 ನನಗೆ ಸಂಬಂಧಿಕನಾಗಿರುವುದರಿಂದ ಆತನಿಗೆ  ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**